KAC – 318

# ಸಂತ ಜೋಸೆಫರ ಕಾಲೇಜು(ಸ್ವಾಯತ್ತ) ಬೆಂಗಳೂರು–27

## ಆಂತರಿಕ ಪರೀಕ್ಷೆ, ಬಿ.ಕಾಂ ಮೂರನೆಯ ಸೆಮಿಸ್ಟರ್, KAC-318

ಸಮಯ:1 ಗಂಟೆ | ವಿಷಯ: ಕನ್ನಡ, | ಅಂಕಗಳು:30

*ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಗಳಿಗನುಗುಣವಾಗಿ ಉತ್ತರಿಸಿ.*

**I.ಈ ಕೆಳಗಿನ ಯಾವುದಾದರೂ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ.** **1x5=5**

1. ಎನ್ನ ಚಿತ್ತವು ಹತ್ತಿಯ ಹಣ್ಣು ನೋಡಯ್ಯಾ
ವಿಚಾರಸಿದಡೆ ಏನೂ ಹುರುಳಿಲ್ಲವಯ್ಯಾ
ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಪುಮಾಡಿ,
ನೀವಿರಿಸಿದಿರಿ, ಕೂಡಲಸಂಗಮದೇವಾ !

2. ಮಡಗಿದ್ ಅಲ್ಲೇ ಮಡಗಿದ್ದಂಗೆ
ಲಂಗರ್ ಬಿದ್ದಿದ್ದ್ ಅಡಗಿದ್ದಂಗೆ
ಸೀತಕ್ ಸಕ್ತಿ ಉಡಗಿದ್ದಂಗೆ
ಅಳ್ಲಾಡಲ್ದು ಮಂಜು !

**II.ಈ ಕೆಳಗಿನ ಯಾವುದಾದರೂ ಒಂದಕ್ಕೆ ಸಂದರ್ಭಸಹಿತ ವಿವರಿಸಿ.** **1x5=5**

3. ಈ ತುಂಗಭದ್ರೆ–ಹೊಳೆಯಲ್ಲ–ವರುಷದ ಮಗಳು; ಇವಳೆನ್ನ ದೇವರಾಗಿಹಳು.

4. ಎಲ್ಲಾ ರಾಜಕುಮಾರರು–ದ್ರಾವಿಡ, ಆರ್ಯ ಯಾರೇ ಆಗಲಿ ಅವರೆಲ್ಲಾ ಆರ್ಯರು.

**III.ಈ ಕೆಳಗಿನ ಯಾವುದಾದರೂ ಎರಡಕ್ಕೆ ಸಂಕ್ಷಿಪ್ತವಾದ ಉತ್ತರ ಬರೆಯಿರಿ.** **2x5=10**

5. ಬಸವಣ್ಣನ ವಚನಗಳಲ್ಲಿ ಕಂಡು ಬರುವ ಸಂದೇಶವೇನು ?

6. ಮಂಜು ಮತ್ತು ಪ್ರಕೃತಿ ಸೌಂದರ್ಯವನ್ನು ಜಿ.ಪಿ ರಾಜರತ್ನಂ ಹೇಗೆ ವರ್ಣಿಸಿದ್ದಾರೆ ?

7. ತುಂಗಭದ್ರೆ ಕವನದ ವಸ್ತು, ವಿಷಯವನ್ನು ತಿಳಿಸಿ.

**IV.ಈ ಕೆಳಗಿನ ಯಾವುದಾದರೂ ಒಂದಕ್ಕೆ ವಿವರವಾದ ಉತ್ತರವನ್ನು ಬರೆಯಿರಿ.** **1x10=10**

8. ಜಾತಿವ್ಯವಸ್ಥೆಯ ಬೆಳವಣಿಗೆಯ ಮೂಲವನ್ನು ಡಾ.ಬಿ.ಆರ್ ಅಂಬೇಡ್ಕರ್ ಅವರು ಹೇಗೆ ತಿಳಿಸಿದ್ದಾರೆ ? ವಿವರಿಸಿ.

9. ಭಿಕ್ಷುವೂ ಮತ್ತು ಪಕ್ಷಿಯೂ ಕಾವ್ಯದಲ್ಲಿ ನೀವು ಗುರುತಿಸಬಹುದಾದ ಮೌಲ್ಯವೇನು? ವಿವರಿಸಿ.

**********************